186 ಶ್ರೀ ನರಸಿಂಹ ನಾಯಕ (ರಾಜು ಗೌಡ) ಸುರಪುರ (ಶಿವಮೊಗ್ಗ ಗ್ರಾಮಾಂತರ)
ಬಸವರಾಜ ಬೊಮ್ಮಾಯಿ ಜಲ ಸಂಪನ್ಮೂಲ ಸಚಿವರು.

1) ಎಸ್.ಸಿ.ಪಿ, ಟಿ.ಎಸ್.ಪಿ ನಲ್ಲಿ ಒಟ್ಟು ಬೃಹತ್ ನೀರಾವರಿ ಇಲಾಖೆಗೆ ಬಿಡುಗಡೆಯಾದ ಹಣವೆಷ್ಟು;

ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳಿಗಾಗಿ 2008–09 ನೇ ಸಾಲಿಗೆ ಮೂರು ನಿಗಮಗಳಿಗೆ ಬಿಡುಗಡೆಯಾದ ಮೊತ್ತ ಇಂತಿದೆ:

ಎಸ್.ಸಿ.ಪಿ. ರೂ. : 74.09 ಕೋಟಿಗಳು

ಟಿ.ಎಸ್.ಪಿ. ರೂ : 30.08 ಕೋಟಿಗಳು

2) ಬಿಡುಗಡೆ ಮಾಡಿದ್ದಲ್ಲಿ, ಇದರಲ್ಲಿ ಕೃಷ್ಣಾ ಭಾಗ್ಯ ಜಲ ನಿಗಮಕ್ಕೆ ಬಿಡುಗಡೆಯಾದ ಅನುದಾನವೆಷ್ಟು;

ಕೃಷ್ಣಾ ಭಾಗ್ಯ ಜಲ ನಿಗಮಕ್ಕೆ ಬಿಡುಗಡೆಯಾದ ಮೊತ್ತ:

ಎಸ್.ಸಿ.ಪಿ. ರೂ. : 10.00 ಕೋಟಿಗಳು

ಟಿ.ಎಸ್.ಪಿ. ರೂ : 5.00 ಕೋಟಿಗಳು

3) ಹಾಗಿದ್ದಲ್ಲಿ, ಯಾವ ಯಾವ ಕಾಮಗಾರಿಗಳಿಗೆ ಎಷ್ಟು ಹಣ ಬಳಸಿಕೊಳ್ಳಲಾಗಿದೆ?

2008–09ನೇ ಸಾಲಿನ ಮಾರ್ಚ್ ಅಂತ್ಯದವರೆಗೆ ಸದರಿ ಯೋಜನೆಯಡಿಯಲ್ಲಿ ಕೈಗೆತ್ತಿಕೊಂಡ ಕಾಮಗಾರಿಗಳಿಗಾಗಿ ರೂ.2081.55 ಲಕ್ಷಗಳು ಖರ್ಚಾಗಿರುತ್ತದೆ. ಕಾಮಗಾರಿವಾರು ಖರ್ಚಿನ ವಿವರವನ್ನು ಈ ಕೆಳಗಿನಂತೆ ನೀಡಲಾಗಿದೆ.

ಕ್ರಮ ಸಂಖ್ಯೆ:	ಕೆಲಸದ ವಿವರ	ವೆಚ್ಚವಾದ ಹಣ (ಲಕ್ಷಗಳಲ್ಲಿ)
1	ಬೋರ್‌ವೆಲ್ ಕಾಮಗಾರಿಗಳು	**283.27**
2	ಸಂಪಿನಿಂದ / ಬಾವಿಯಿಂದ ನೀರೆತ್ತುವ ಕಾಮಗಾರಿಗಳು	**396.27**
3	ಪಿಕ್‌ಅಪ್ಸ್	**371.62**
4	ಪಂಪ್‌ಸೆಟ್, ಪೈಪ್‌ಲೈನ್ ಮತ್ತು ಎಲೆಕ್ಟ್ರಿಕಲ್ ಇನ್‌ಸ್ಟಲೇಶನ್ ಕಾಮಗಾರಿಗಳು	**59.98**
5	ಚೆಕ್ ಡ್ಯಾಮ್/ ಬಾಂದಾರಗಳು	**180.39**
6	ತೆರೆದ ಬಾವಿಗಳು	**428.22**
7	ರಸ್ತೆಗಳು / ಆಂತರಿಕ ರಸ್ತೆಗಳು	**209.31**
8	ನೀರಿನ ಸರಬರಾಜು ವ್ಯವಸ್ಥೆ	**88.70**
9	ಅಂಗನವಾಡಿ / ಸಮುದಾಯ ಭವನ / ಶೌಚಾಲಯಗಳು ಮತ್ತು ದೋಭಿಘಾಟ್	**63.79**
	ಒಟ್ಟು ಖರ್ಚು	**2081.55**